


ಮಾತಾಡಿದರೆ ಈ ತಲೆಹರಟೆಗಳು ಇನ್ನೊಂದು ರೀತಿಯಲ್ಲಿ ಮಾತಾಡುತ್ತಾರೆ. ಅಧಿಕಪ್ರಸಂಗಿಗಳು...''

ಗೊತ್ತಾಯಿತು! ಅಧಿಕ ಶಾಣ್ಯಾ, ಅಧಿಕ ಪ್ರಸಂಗಿ, ವಿತಂಡವಾದಿ, ತಲೆಹರಟೆ ಮತ್ತು ದುರಹಂಕಾರಿ ಜನರಿಗೆ ಬುದ್ಧಿಜೀವಿ ಎಂದು ಕರೆಯುತ್ತಾರೆ. ಸಂದೇಹವೇ ಇಲ್ಲ, ಬುದ್ಧಿಜೀವಿ ಆಗದಿರುವುದೇ ಒಳ್ಳೆಯದು.

''ಈಗ ಸ್ಪಷ್ಟವಾಗ್ತಾ ಇದೆ. ನಾನು ಬುದ್ಧಿಜೀವಿ ಅಲ್ಲ. ಅಲ್ಲವೇ ಅಲ್ಲ. ನೀವೂ ಬುದ್ಧಿಜೀವಿ ಅಲ್ಲ ಎಂದುಕೊಳ್ಳಬಹುದೇ?'' ಕುತೂಹಲ ತೋರುತ್ತಾ ಕೇಳಿದೆ.

''ಖಂಡಿತ ಅಲ್ಲ, ನಾನು ಬುದ್ಧಿಜೀವಿ ಅಲ್ಲ.''

''ಹಾಗಾದರೆ ನಿಮಗೆ ಬುದ್ಧಿ ಇಲ್ಲ'' ಒಂದು ದೊಡ್ಡ ಸಮೀಕರಣ ಬಿಡಿಸಿದ ತೃಪ್ತಿಯಿಂದ ಕೇಳಿದೆ. ನನ್ನ ವಿನಯವನ್ನು ತಾವೆಲ್ಲರೂ ಒಪ್ಪಬೇಕು, ಅಷ್ಟು ಸಹಜ ಸರಳತೆಯಿಂದ ಕೇಳಿದ್ದೆ.

ಆದರೇನು? ಗೆಳೆಯರು ಒಮ್ಮೆಲೆ ಸಿಟ್ಟಿಗೆದ್ದರು. ನನ್ನನ್ನು ದುರು ದುರು ನೋಡುತ್ತಾ ಸಿಡಿಮಿಡಿಗೊಂಡು ಎದ್ದು ನಡೆದರು.

★★★

ಇದು ಅನೇಕ ಸಲ ಹೀಗಾಗಿದೆ. ನಾನೇನೋ ಸಹಜ ಕುತೂಹಲದಿಂದ ಒಂದು ಸಮಸ್ಯೆಯ ಕುರಿತು ಯೋಚಿಸುತ್ತೇನೆ. ಸುತ್ತ ಮುತ್ತ ಇರುವವರನ್ನು ಮೊದಲಿಗೆ ವಿಚಾರಿಸುತ್ತೇನೆ, ಅವರಲ್ಲಿ ಬಹುತೇಕ ಜನರು ತಮಗೆ ಗೊತ್ತಿಲ್ಲ ಎನ್ನುತ್ತಾರೆ. ಇವರಿಂದ ನನಗೆ ಅಷ್ಟು ತೊಂದರೆ ಆಗಿಲ್ಲ. ಎಲ್ಲಾ ಸಲ ನನ್ನ ಅದೃಷ್ಟ ಚೆನ್ನಾಗಿರುವುದಿಲ್ಲ. ಆಗ